

## ಮರೆಯಾದ ಹಿರಿಯ ಸಂವಾಹಕ!

ನಾವು, ಆಧುನಿಕ ಕಾಲದಿಂದ ಡಿಜಿಟಲ್ ಯುಗಕ್ಕೆ ಕಾಲಿಡುತ್ತಿದ್ದಂತೆ ಅದೆಷ್ಟೋ ಸಾಂಪ್ರದಾಯಿಕ ವಸ್ತುಗಳು ಮರೆಯಾಗಿ ಹೋಗುತ್ತಿವೆ. ಮನೆಯಲ್ಲಿ ಉಪಯೋಗಿಸುವ ಸಣ್ಣ ಸಣ್ಣ ವಸ್ತುಗಳಿಂದ ಹಿಡಿದು ದೇಶ ಕಾಯೋ ದೊಡ್ಡ ಮಿಸೈಲ್‌ವರೆಗೆ ಎಲ್ಲವೂ ಡಿಜಿಟಲ್ ರೂಪ ಪಡೆದುಕೊಂಡಿವೆ. ಅದರಲ್ಲಿ ಈ ಪೋಸ್ಟ್ ಬಾಕ್ಸ್ ಕೂಡ ಒಂದು. ಮೊದಲೆಲ್ಲ ದೂರದಲ್ಲಿರುವ ಯಾರಿಗಾದರೂ ಒಂದು ವಿಷಯ ತಿಳಿಸಬೇಕೆಂದರೆ, ಕಾಗದದಲ್ಲಿ ವಿಷಯ, ವಿಳಾಸ ಬರೆದು ಅದನ್ನು ತಮ್ಮ ಹತ್ತಿರದಲ್ಲಿನ ಅಂಚೆ ಪೆಟ್ಟಿಗೆಯಲ್ಲಿ ಹಾಕುತ್ತಿದ್ದರು. ಪೋಸ್ಟ್ ಮ್ಯಾನ್ ಅದನ್ನು ತೆಗೆದುಕೊಂಡು ಹೋಗಿ ಆ ವಿಳಾಸಕ್ಕೆ ತಲುಪಿಸುತ್ತಿದ್ದ. ಈ ಪ್ರಕ್ರಿಯೆಗೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತಿತ್ತಾದರೂ, ಪತ್ರ ಬರೆದು ಇನ್ನೊಬ್ಬರಿಗೆ ಕಳುಹಿಸುವುದು, ಬಂದ ಪತ್ರವನ್ನು ತೆಗೆದು ಓದುವುದರಲ್ಲಿ ಸಿಗುತ್ತಿದ್ದ ಖುಷಿಯೇ ಬೇರೆ. ಹಾಗೆ ಒಬ್ಬರಿಂದ ಮತ್ತೊಬ್ಬರಿಗೆ ಸಂವಹನ ನಡೆಸಲು ಸಹಾಯಕವಾಗಿದ್ದವನು ಈ ಅಂಚೆ ಪೆಟ್ಟಿಗೆ. ಸಂದೇಶ ಕಳುಹಿಸುವ ಅನೇಕ ಮೊಬೈಲ್ ಆ್ಯಪ್‌ಗಳು ಅಸ್ತಿತ್ವಕ್ಕೆ ಬರುತ್ತಿದ್ದಂತೆ ಈ ಸಂವಾಹಕ ಮರೆಯಾಗುತ್ತಿದ್ದಾನೆ. ಆಗ ಪತ್ರ ತೆಗೆದು ಓದುವಾಗ ಇದ್ದ ಖುಷಿ ಈಗ ಗಂಟೆಗಟ್ಟಲೆ ಫೋನಿನಲ್ಲಿ ಮಾತನಾಡಿದರೂ ಸಿಗುವುದಿಲ್ಲ ಬಿಡಿ.

–ಹನುಮಂತ ಎಸ್.ಕೆ., ರಾಯಚೂರು




## ನೀರು ಕಾಯಿಸುವ ಬೊಂಬು

ಗೀಸರ್, ವಾಟರ್ ಹೀಟರ್, ಬಾಯ್ಲರ್, ಸೋಲಾರ್ ವಾಟರ್ ಹಿಟರ್‌ಗಳನ್ನು ನೀರು ಕಾಯಿಸಲು ಬಳಸುತ್ತಿರುವ ಈಗಿನವರಿಗೆ 80–90ರ ದಶಕದಲ್ಲಿ ಮಧ್ಯಮ ವರ್ಗದವರು ನೀರು ಕಾಯಿಸಲು ಬಳಸುತ್ತಿದ್ದ ಬೊಂಬು ಬಗ್ಗೆ ಗೊತ್ತಿರಲಿಕ್ಕಿಲ್ಲ. ಏಕೆಂದರೆ ಹಿಂದೆ ಬಳಸುತ್ತಿದ್ದ ಬೊಂಬುಗಳು ಈಗ ಬಹುತೇಕ ಮನೆಗಳಿಂದ ಕಣ್ಮರೆಯಾಗಿವೆ. ಇದನ್ನು ನೋಡಬೇಕಾದರೆ ಬಹುಶಃ ಮ್ಯೂಸಿಯಂಗೆ ಹೋಗಬೇಕು ಎನ್ನುವ ಹಾಗಾಗಿದೆ.

ಈ ಬೊಂಬು ತಾಮ್ರದಿಂದ ಮಾಡಿದ ಸಿಲಿಂಡರ್ ಆಕಾರದ ಹಂಡೆ. ಇದರೊಳಗೆ ಎರಡು ಪದರುಗಳಿವೆ. ಹೊರಗಿನ ಪದರಿನಲ್ಲಿ ನೀರು ಹಾಕಿ ಒಳಗಿನ ಭಾಗದಲ್ಲಿ ಬೆಂಕಿ ಹಾಕಲಾಗುತ್ತಿತ್ತು. ಬೆಂಕಿಯ ಶಾಖಕ್ಕೆ ಹೊರಭಾಗದ ಪದರಿನಲ್ಲಿದ್ದ ನೀರು ಕಾಯುತ್ತಿತ್ತು. ಈ ಬೊಂಬುವಿನ ಮಧ್ಯದಲ್ಲಿ ಸುಮಾರು ಎರಡು ಮೂರು ಅಡಿಯ ಕೊಳವೆಯಿದ್ದು, ಅದರ ಮುಖಾಂತರ ಹೊಗೆಯು ಮೇಲಕ್ಕೆ ಹೋಗುತ್ತಿತ್ತು. ಕೆಳಭಾಗದಲ್ಲಿ ಕಬ್ಬಿಣದ ಒಂದು ಬುಟ್ಟಿಯಿದ್ದು, ಅದರಲ್ಲಿ ಉರಿದ ಉರುವಲಿನ ಬೂದಿ ಬೀಳುತ್ತಿತ್ತು. ಇದರಿಂದ ಬರುತ್ತಿದ್ದ ಹೊಗೆಯು ಮನೆಯನ್ನು ತುಂಬಿಕೊಳ್ಳಬಾರದೆಂಬ ಕಾರಣದಿಂದ ಇದನ್ನು ಮನೆಯ ಅಂಗಳದಲ್ಲಿ ಇಟ್ಟು ನೀರು ಕಾಯಿಸಲಾಗುತ್ತಿತ್ತು.

ಕಾದ ನೀರನ್ನು ಅದಕ್ಕಿರುವ ನಲ್ಲಿಯಿಂದ ಬಕೆಟ್‌ಗೆ ಬಿಟ್ಟುಕೊಂಡು ಸ್ನಾನಗೃಹಕ್ಕೆ ಒಯ್ಯುತ್ತಿದ್ದರು. ಈ ಮಾದರಿ ಪರಿಸರಸ್ನೇಹಿಯೂ ಆಗಿತ್ತು. ಮನೆಯಲ್ಲಿರುವ ಒಣಕಸವನ್ನು ಇದಕ್ಕೆ ಬಳಸುವುದರಿಂದ ಕಸದ ವಿಲೇವಾರಿ ಸಮಸ್ಯೆ ಬಗೆಹರಿಯುತ್ತಿತ್ತು. ತೆಂಗಿನ ಚಿಪ್ಪು, ತೆಂಗಿನ ನಾರು, ಹರಿದ ರದ್ದಿಕಾಗದ, ಭತ್ತದ ಒಣಹುಲ್ಲು ಹೀಗೆ ಹಲವು ತ್ಯಾಜ್ಯ ವಸ್ತುಗಳನ್ನು ಇದರಲ್ಲಿ ಬಳಸಲಾಗುತ್ತಿತ್ತು. ಎಲ್‌ಪಿಜಿ ಗ್ಯಾಸ್ ಅಭಾವ ಮತ್ತು ಹೆಚ್ಚು ಬೆಲೆಯಿಂದಾಗಿ ತತ್ತರಿಸುತ್ತಿರುವ ಜನರು ಬೊಂಬುಗಳತ್ತ ಮತ್ತೆ ಮುಖ ಮಾಡಲೂಬಹುದು.







–ಶರದ ಕುಲಕರ್ಣಿ, ಬೀದರ್